ನಡೆಯಬೇಕಾದ ಚಲನೆಯ ಬಗ್ಗೆ ಮಾತನಾಡುತ್ತಲೇ ಹೊರಗೆ ಎದುರಾಗುತ್ತಿರುವ ಪರಕೀಯತೆಯ ಕುರಿತು ಒಟ್ಟಾಗಿ ಮಾತಾಡಲೇ ಬೇಕಾಗಿದೆ. ಇದನ್ನೇ ರಹಮತ್ ತರೀಕೆರೆಯವರು 'ಕತ್ತಿಯಂಚಿನ ದಾರಿ' ಎಂದದ್ದು.

ಬಾನು ಅವರು ತಮ್ಮ ಕಥೆಗಳನ್ನು ಎಲ್ಲ ಸಾಂಸ್ಕೃತಿಕ ವಿವರಗಳೊಂದಿಗೆ ನಿರೂಪಿಸುತ್ತಾ ನಮ್ಮನ್ನು ಸೆಳೆದುಬಿಡುತ್ತಾರೆ. ಅವರ ಕಥೆಗಳು ತಂತ್ರ, ಜೆಗಿತದ ದೃಷ್ಟಿಯಿಂದ ಪ್ರಯೋಗಶೀಲವಲ್ಲದಿದ್ದರೂ ಕಟುವಾಸ್ತವವನ್ನು ತೆರೆದಿಡುವ ಮೂಲಕ ಸೆಳೆದುಬಿಡುತ್ತವೆ. ಅವುಗಳೊಳಗೆ ನಾವು ಮುಳುಗಿದಂತೆ ದಟ್ಟ ವಿಷಾದ ಆವರಿಸಿಕೊಳ್ಳುತ್ತಾ ಹೋಗುತ್ತದೆ. ಇಲ್ಲಿನ ಕಥೆಗಳು ಸಮುದಾಯದೊಳಗೆ ಬಡವರು, ಹೆಣ್ಣುಮಕ್ಕಳು ಎದುರಿಸುತ್ತಿರುವ ಸಂಕಷ್ಟಗಳನ್ನು ತೆರೆದಿಡುತ್ತವೆ. ಆದರೆ ವಿಸ್ತಾರವಾದ ನೆಲೆಯಲ್ಲಿ, ತೀವ್ರತೆಯಲ್ಲಿ ಮತ್ತು ವಿಧದಲ್ಲಿ ಭಿನ್ನವಾದರೂ ಒಟ್ಟಾರೆಯಾಗಿ ಹೆಣ್ಣುಮಕ್ಕಳು ಪಿತೃಪ್ರಾಧಾನ್ಯ ವ್ಯವಸ್ಥೆಯಲ್ಲಿ ನಲುಗುವ ಬಗೆ ಎಲ್ಲ ಸಂಸ್ಕೃತಿ ಸಮುದಾಯಗಳಲ್ಲೂ ಕಾಣುವ ವಾಸ್ತವವೇ ಆಗಿದೆ. ಹೀಗಾಗಿ ರಾಹಿಲ ಬದಲಿಗೆ ರೋಹಿಣಿ ಇದ್ದರೂ ಅವಳೂ ಸಿಕ್ಕಿಹಾಕಿಕೊಂಡಿರುವುದು ಈ ವ್ಯವಸ್ಥೆಯೊಳಗೇ.

ಬಾನು ಅವರು ತಮ್ಮ ಹೋರಾಟದ ಬದುಕಿನಲ್ಲಿ ವಿವಿಧ ಸಂಘಟನೆಗಳ ಜೊತೆಗೂಡಿ ಕೆಲಸ ಮಾಡಿದರು. ಅಂದಿನ ಹಾಸನ, ಚಳವಳಿಗಳ ನೆಲವಾಗಿ ಚೈತನ್ಯಶೀಲವಾಗಿದ್ದು, ಈ ಚಳವಳಿಗಳ ಮೂಲಕ ಬಾನು ಅವರು ಹಾಗೂ ಅವರ ಮೂಲಕ ಚಳವಳಿ ಪರಸ್ಪರ ಬಲ ಪಡೆದದ್ದು ಗಮನಿಸಬೇಕಾದ ಸಂಗತಿ. ಕರ್ನಾಟಕದ ದಲಿತ, ರೈತ ಹೋರಾಟಗಳ ಚರಿತ್ರೆಯಲ್ಲಿ ಹಾಸನಕ್ಕೆ ವಿಶೇಷ ಸ್ಥಾನವಿದೆ. ಚಂದ್ರಪ್ರಸಾದ್ ತ್ಯಾಗಿ, ಆರ್.ಪಿ. ವೆಂಕಟೇಶಮೂರ್ತಿ, ಮಂಜುನಾಥ ದತ್ತ ಮೊದಲಾದ ನಾಯಕರು ಈ ಹೋರಾಟಗಳನ್ನು ಮುನ್ನಡೆಸಿದರು. ಅದೇ ಹೊತ್ತಿಗೆ ಕರ್ನಾಟಕದಲ್ಲಿ ದಲಿತ ಬಂಡಾಯ ಒಂದು ಸಾಹಿತ್ಯಿಕ ಚಳವಳಿಯಾಗಿಯೂ, ಸಾಮಾಜಿಕ ಚಳವಳಿಯಾಗಿಯೂ ಹೊರಹೊಮ್ಮಿತು. ಬಂಡಾಯ ಸಂಘಟನೆಯ ರಾಜ್ಯ ಸಂಚಾಲಕಿಯಾಗಿಯೂ ಬಾನು ಅವರು ಕೆಲಸ ಮಾಡಿದ್ದಾರೆ. ಜೊತೆಗೆ ಕರ್ನಾಟಕದಲ್ಲಿ ಸೌಹಾರ್ದವನ್ನು ಕದಡುವ ಪ್ರಯತ್ನಗಳು ನಡೆಯುತ್ತಿರುವ ಹೊತ್ತಲ್ಲಿ ಸಾಮರಸ್ಯವನ್ನು ಕಾಪಿಟ್ಟುಕೊಳ್ಳುವ ಹೋರಾಟಗಳು 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಮೂಲಕ ನಡೆದಾಗ ಬಾನು ಅವರು ಇದರಲ್ಲಿ ಸಕ್ರಿಯರಾಗಿ ಪಾಲ್ಗೊಂಡವರು. ಬಾಬಾ ಬುಡನ್ ಗಿರಿಯ ವಿಚಾರ ಇಟ್ಟುಕೊಂಡು ಶಾಂತಿ ಕದಡುವ ಯತ್ನಗಳು ನಡೆದಾಗ ಗೌರಿ, ಗಿರೀಶ ಕಾರ್ನಾಡ್, ಕೆ. ಮರುಳಸಿದ್ಧಪ್ಪ ಮುಂತಾದವರ ಜೊತೆಗೆ ಬಾನು ಅವರೂ ಮುಂಚೂಣಿಯಲ್ಲಿ ನಿಂತಿದ್ದಾರೆ.

ಬಾನು ಅವರು ನಿಜವಾದ ಅರ್ಥದಲ್ಲಿ ಆಧುನಿಕ ಮಹಿಳೆ. ಎಲ್ಲ ಬಗೆಯ ಕಷ್ಟಗಳಿಗೆ ಎದುರಾಗಿ ಬದುಕನ್ನು ಕಟ್ಟಿಕೊಂಡ ಬಗೆ ಅದ್ಭುತವಾದದ್ದು. ನನ್ನ ವಯಸ್ಸಿನವರು 70-80ರ ದಶಕದ ಹೋರಾಟಗಳ ಕುರಿತು ಕೇಳಿ ಬಲ್ಲೆವೇ ಹೊರತು ಕಂಡಿಲ್ಲ. ಆದರೆ ನಾನು ಹಾಸನದಲ್ಲಿದ್ದಾಗ ಹಲವು ಸಂದರ್ಭಗಳಿಗೆ ಸಾಕ್ಷಿಯಾಗಿದ್ದೆ. ಬರಹಗಾರ್ತಿಯಾಗಿ, ವಕೀಲೆಯಾಗಿ, ವ್ಯಕ್ತಿಯಾಗಿ ಬಾನು ಅವರದು ಆಕರ್ಷಕ ವ್ಯಕ್ತಿತ್ವ. ಅವರ ಮಾತುಗಳು, ಒಡನಾಟ ಚೈತನ್ಯ ತುಂಬುವಂಥದ್ದು. ಅವರ ಜೀವನಾಸಕ್ತಿ, ಉಡುಗೆ ತೊಡುಗೆಯಲ್ಲಿನ ಒಪ್ಪ ಓರಣ, ಶಿಸ್ತು, ಬದ್ಧತೆ ಎಲ್ಲವುಗಳಿಂದ ನಾನು ಕಲಿತದ್ದು ತುಂಬಾ. ಹತ್ತು ಹದಿನೈದು ವರ್ಷಗಳ ಹಿಂದೆಯೇ ಕಾರು ಓಡಿಸಲು ಕಲಿತು ಸ್ವತಂತ್ರವಾಗಿ ಓಡಾಡುವುದು, ಅನಿಸಿದ್ದನ್ನು ನಿರ್ಭೀತವಾಗಿ ಹೇಳುವುದು, ಸಂಘಟನೆಗಳಲ್ಲಿ ಕೆಲಸ ಮಾಡುವುದು ಎಲ್ಲವೂ ನನ್ನನ್ನು ತುಂಬಾ ಪ್ರಭಾವಿಸಿವೆ. ಬದುಕಿನಲ್ಲಿ ಎದುರಾದ ಸಂಕಷ್ಟಗಳನ್ನು ಛಾತಿಯಿಂದ ಎದುರಾಗಿ ಘನತೆಯಿಂದ ನಿರ್ವಹಿಸುವ ಬಗೆ ನಿಜಕ್ಕೂ ಅವರ ಬಗೆಗಿನ ಗೌರವವನ್ನು ಇಮ್ಮಡಿಗೊಳಿಸಿದೆ.

ಹಾಸನದ ಸಮೀಪದ ಸಿಗರನಹಳ್ಳಿಯಲ್ಲಿ ದಲಿತರು ದೇವಸ್ಥಾನ ಪ್ರವೇಶಿಸದಂತೆ ಬಹಿಷ್ಕಾರ ಹಾಕಿದಾಗ ಆ ಹೋರಾಟದಲ್ಲಿ ಅವರು ಸಕ್ರಿಯರಾಗಿ ಜಾಥಾವನ್ನು ಉದ್ಘಾಟಿಸಿದ್ದರು. ಟಿಪ್ಪು ಜಯಂತಿಯ ವಿಚಾರದಲ್ಲಿ ಹಾಸನದಲ್ಲಿ ಶಾಂತಿ ಕದಡಿದಾಗ ತುಂಬಾ ವಿಹ್ವಲರಾಗಿ 'ಈ ಕುರಿತು ಏನು ಮಾಡಬಹುದು' ಎಂದು ನಿರಂತರ ಕೆಲಸ ಮಾಡುತ್ತಿದ್ದುದು ನೆನಪಿದೆ. ಹಾಸನದಲ್ಲಿನ ಯಾವುದೇ ಜನಪರ ಹೋರಾಟ, ಕಾರ್ಯಕ್ರಮ ಇರಲಿ, ಅವರು ಯಾವುದೇ ಭಿಡೆ